ಔಷಧಿಗಳ ಸರಬರಾಜಿನ ಬಗ್ಗೆ

729 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಒದಗಿಸುತ್ತಿರುವ ಔಷಧಿಗಳು ಸಾಕಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗ್ರಾಮಾಂತರ ಪ್ರದೇಶದ ಜನರಿಗೆ ತೊಂದರೆಯಾಗಿರುವುದು ಸಹಾ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು):

ಅ) ಹೌದು

ಆ) ಹೌದು

ಇ) 1991-92ನೇ ಸಾಲಿನಿಂದ ಪ್ರತಿಯೊಂದು ಆಸ್ಪತ್ರೆಗೆ ನಿಗದಿಪಡಿಸಿರುವ ಆಯವ್ಯಯ ಅನುದಾನದ ಶೇಕಡಾ 60ರ ಪ್ರಮಾಣದ ಔಷಧಿ ಮತ್ತಿತರ ವಸ್ತುಗಳನ್ನು ಸರ್ಕಾರವೇ ನೇರವಾಗಿ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಪ್ರೌಢಶಾಲಾ ಶಿಕ್ಷಕರ ಕೊರತೆಯ ಬಗ್ಗೆ

686 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಶಾಲೆಯಲ್ಲಿ ಮಂಜೂರಾದ ಶಿಕ್ಷಕರ ಸಂಖ್ಯೆ ಎಷ್ಟು?

ಆ) ವಿದ್ಯಾರ್ಥಿಗಳ ಸಂಖ್ಯೆಗನುಸಾರವಾಗಿ ಶಿಕ್ಷಕರ ನೇಮಕಾತಿ ಆಗಿದೆಯೇ? (ಹುದ್ದೆವಾರು ವಿವರ)

ಇ) ಈಗ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ)

ಈ) ಈ ಕೊರತೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) 14 ಹುದ್ದೆಗಳು.

ಆ) 12 ಹುದ್ದೆಗಳಿಗೆ ನೇಮಕಾತಿ ಆಗಿದೆ.

ಭಾಷಾ ಶಿಕ್ಷಕರ ಹುದ್ದೆಗಳು - 3

ಕಲಾ ಶಿಕ್ಷಕರ ಹುದ್ದೆಗಳು - 3

ಲೆಕ್ಕ ಶಿಕ್ಷಕರ ಹುದ್ದೆಗಳು - 2

ದೈಹಿಕ ಶಿಕ್ಷಕರ ಹುದ್ದೆಗಳು ಗ್ರೇಡ್-1 - 1

ದೈಹಿಕ ಶಿಕ್ಷಕರ ಹುದ್ದೆಗಳು ಗ್ರೇಡ್-2 - 1

ವೃತ್ತಿ ಶಿಕ್ಷಕರ ಹುದ್ದೆಗಳು - 2

ಇ) ವಿಜ್ಞಾನ ಶಿಕ್ಷಕರು - 1

ಸಂಸ್ಕೃತ ಶಿಕ್ಷಕರು

ಈ) ಮುಂದಿನ ನೇಮಕಾತಿಯಲ್ಲಿ ತುಂಬಲಾಗುವುದು.

ಕುಂದಾಪುರ ತಾಲ್ಲೂಕಿನ ಪದವಿ ಪೂರ್ವ ಕಾಲೇಜುಗಳಲ್ಲಿ ಅದ್ಯಾಪಕರ ಕೊರತೆ ಕುರಿತು

687 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ತೆಕ್ಕಟ್ಟೆ ಪದವಿ ಪೂರ್ವಕಾಲೇಜಿಗೆ ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು (ಹುದ್ದೆವಾರು)?

ಆ) ಈ ಕೊರತೆ ಇರುವ ಉಪನ್ಯಾಸಕರ ಸಂಖ್ಯೆ (ಹುದ್ದೆವಾರು ವಿವರ ನೀಡುವುದು)?

ಇ) ಈ ಕೊರತೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಸರ್ಕಾರಿ ಪದವಿಪೂರ್ವ ಕಾಲೇಜು,ತೆಕ್ಕಟ್ಟೆ, ಮಂಜೂರಾದ ಹುದ್ದೆಗಳು-7

1. ಕನ್ನಡ - 1
2. ಆಂಗ್ಲ - 1
3. ಇತಿಹಾಸ - 1
4. ರಾಜ್ಯಶಾಸ್ತ್ರ - 1
5. ಅರ್ಥಶಾಸ್ತ್ರ - 1
6. ಸಮಾಜಶಾಸ್ತ್ರ - 1
7. ವಾಣಿಜ್ಯ ಶಾಸ್ತ್ರ - 1

\- 7

ಆ) ಕೊರತೆ ಇರುವ ಉಪನ್ಯಾಸಕರ ಸಂಖ್ಯೆ -2,

1. ಅರ್ಥಶಾಸ್ತ್ರ - ವರ್ಗದಿಂದ ಹುದ್ದೆ ತೆರವಾಗಿದೆ.
2. ಸಮಾಜಶಾಸ್ತ್ರ - ಅದೇ -

ಇ) ಈ ಕೊರತೆಯನ್ನು ಎಸ್.ಎಸ್.ಎಲ್.ಸಿ. ಅಭ್ಯರ್ಥಿಗಳ ಪಟ್ಟಿಯಿಂದ ತುಂಬಲಾಗುವುದು.

ರಾಜ್ಯದಲ್ಲಿನ ಆಂಗ್ಲ ಭಾಷೆಯ ಶಾಲೆಗಳ ಬಗ್ಗೆ

699 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಂಗ್ಲ ಮಾಧ್ಯಮದ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡುವಂತೆ ವಿವಿಧ ಶಾಸಕರು ಮನವಿ ಅರ್ಪಿಸಿದ್ದು ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?